ನಾಲ್ವರು ತಂಗಿಯರು. ಅವರಿಗೆ ಮದುವೆ ತಡವಾಗುವುದು ಬೇಡ ಎಂದು ಬಂದ ಮೊದಲನೇ ಸಂಬಂಧವನ್ನೇ ಒಪ್ಪಿಕೊಂಡೆ. ಗಂಡ ತುಂಬಾನೇ ಒಳ್ಳೆಯವರು. ಆದರೆ ಎಸ್ಟೇಟಿನವರದು ಬದಲಾವಣೆಗಳಿಲ್ಲದ ಏಕತಾನತೆಯ ಜೀವನ. ಜೀವನವನ್ನು ಬಂದ ಹಾಗೆ ಸ್ವೀಕರಿಸಿದ್ದೇನೆ. ಅಂದ ಹಾಗೆ ನಿಮಗೆ ನನ್ನ ನಂಬರ್ ಹೇಗೆ ಸಿಕ್ಕಿತು?"

"ನನ್ನ ಮಗ ಬ್ಯಾಂಕ್ ಆಫೀಸರಾಗಿ ಮೂಡಿಗೆರೆಯಲ್ಲಿದ್ದ. ಆಗ ಅನಿರೀಕ್ಷಿತವಾಗಿ ನಿಮ್ಮ ಮನೆಗೆ ಹೋಗಿ ಬಿಡಲೇ ಎಂದು ಅನಿಸುತ್ತಿತ್ತು. ಯಾಕೋ ಹಿಂಜರಿಕೆ. ಅವನಿಗೆ ಟ್ರಾನ್ಸ್‌ಫರ್ ಆಗಿ, ನಾನು ಡಿಪ್ರೆಷನ್ನಿನಿಂದ ಹೊರ ಬಂದ ಮೇಲೆ ಸಾಯುವ ಮೊದಲು ಒಮ್ಮೆಯಾದರೂ ನಿಮ್ಮನ್ನು ಮಾತಾಡಿಸಬೇಕು ಅನ್ನಿಸ್ತು. ಮೂಡಿಗೆರೆ ಸ್ನೇಹಿತರೊಬ್ಬರು ನಿಮ್ಮ ತಂಗಿ ನಂಬರು ಕೊಟ್ರು. ಅವಳು ನಿಮ್ಮ ಐವತ್ತು ವರ್ಷದ ಕತೆ ಹೇಳಿ ನಂಬರ್ ಕೊಟ್ಳು. ನಿಮ್ಮನ್ನು ನೋಡಬೇಕೆನಿಸಿದೆ. ಏನ್ ಮಾಡ್ಲಿ?"

"ನಾನು ಪ್ರತಾಪ್‌ಗೆ ಎಲ್ಲಾ ವಿಷಯ ಹೇಳ್ತೀನಿ. ಆ ಮೇಲೆ ನಿಮ್ಮನ್ನ ಮನೆಗೇ ಕರೆಸಿಕೊಳ್ತೀವಿ. ಕುಟುಂಬ ಸಹಿತ ಬನ್ನಿ. ಆದರೆ ಅದೇಕೆ ಇಷ್ಟು ದೀರ್ಘಕಾಲದಲ್ಲಿ ನಿಮಗೆ ನನ್ನನ್ನು ಮರೆಯಲು ಸಾಧ್ಯವಾಗಲಿಲ್ಲ?"

